# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

*ಎಸ್‌ಸಿ.* 119/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಶಾಂತಲಿಂಗಯ್ಯ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಲೇ.ರಾಮಲಿಂಗೇಗೌಡ | | **14.03.2025** |
| **ವಯಸ್ಸು** | ಃ **56** **ವರ್ಷ** | | |
| **ವೃತ್ತಿ** | ಃ ಪಿ.ಎಸ್.ಐ, ಮೈಸೂರು ದಕ್ಷಿಣ ಪೋಲೀಸ್ ಠಾಣೆ | **ಪ್ರಾ.ಸಾ.** | ಃ **49** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ **66** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2017* ಜುಲೈ ನಿಂದ *2023* ಡಿಸೆಂಬರ್ ರವರೆಗೆ ಮೈಸೂರು ದಕ್ಷಿಣ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಮಾಡಿದ್ದೆ. ಆ ಕಾಲಕ್ಕೆ ದಿಃ*22.10.2021* ರಂದು ನನ್ನನ್ನು ಮೈಸೂರು ದಕ್ಷಿಣ ಪೋಲೀಸ್ ಠಾಣೆಯ ಮೊಸಂಖ್ಯೆ *310/2021* ಪ್ರಕರಣದಲ್ಲಿ ಮೃತ ಶಿವಪ್ರಕಾಶ್ ಇವರ ಮೃತ ದೇಹದ ಶವ ತನಿಖಾ ಕಾಲಕ್ಕೆ ಹಾಜರಿದ್ದು ತನಿಖಾಧಿಕಾರಿ ಹೇಳಿದಂತೆ ಶವ ತನಿಖಾ ಮಹಜರ್ ಅನ್ನು ಬರೆದಿದ್ದೆ. ಬೆಳಗ್ಗೆ *6* ರಿಂದ *8.30* ರವರೆಗೆ ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರದಲ್ಲಿ ಶಿವಪ್ರಕಾಶ್ ಇವರ ಶವ ಮಹಜರ್ ಬರೆದಿದ್ದೆ. ದಿಃ*24.10.2021* ರಂದು ಆರೋಪಿ ಸಾಗರ್ ಇವರನ್ನು ತನಿಖಾಧಿಕಾರಿಗಳು ದಸ್ತಗಿರಿ ಮಾಡಿದ್ದು ಆರೋಪಿ ಸ್ವಇಚ್ಛಾ ಹೇಳಿಕೆ ಮೇರೆಗೆ ಕೃತ್ಯದ ಕಾಲಕ್ಕೆ ಬಳಸಿದ್ದ ಕೆಎ*–09–*ಹೆಚ್.ಎಂ*–9192* ಸಂಖ್ಯೆಯ ದ್ವಿಚಕ್ರ ವಾಹನ, ಕೃತ್ಯದ ಕಾಲಕ್ಕೆ ಆರೋಪಿ ಧರಿಸಿದ್ದ ಟಿ.ಶರ್ಟ್, ಪ್ಯಾಂಟ್ ಅನ್ನು ಅಮಾನತ್ತು ಪಡಿಸಿಕೊಂಡಿದ್ದರು. ಆ ಕಾಲಕ್ಕೆ ಮದ್ಯಾಹ್ನ *12.15* ರಿಂದ *1.45* ರವರೆಗೆ ಆ ಮಹಜರ್ ಮಾಡಿದ್ದು ತನಿಖಾಧಿಕಾರಿಯ

ಹೇಳಿಕೆಯಂತೆ ನಾನು ಮಹಜರ್ ಬರೆದಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-40 ಆ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-40(ಸಿ) ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನಿ.ಪಿ-7 ರಿಂದ 9 ಫೋಟೋದಲ್ಲಿ ಕಾಣುವ ವಾಹನ ಆ ದಿನ ಅಮಾನತ್ತು ಪಡಿಸಿಕೊಂಡ ವಾಹನ ಇದೆ. ಈಗ ನಾನು ನೋಡುತ್ತಿರುವ ಎಂ.ಒ- 15 ಮತ್ತು 23 ಎಂದು ಗುರುತಿಸಿರುವ ಟಿ.ಶರ್ಟ್ ಮತ್ತು ಪ್ಯಾಂಟ್ ನಿ.ಪಿ-40 ಮಹಜರ್ ಕಾಲಕ್ಕೆ ವಶಪಡಿಸಿಕೊಂಡ ಬಟ್ಟೆಗಳಿವೆ.

2. ಅದೇ ದಿನ ಆರೋಪಿತ ಸಿದ್ದಲಿಂಗೇಶ್ವರ ಬಡಾವಣೆಯ ಒಂದು ಆಲದ ಮರದ ಹತ್ತಿರ ಇಟ್ಟಿದ್ದ ಕೃತ್ಯಕ್ಕೆ ಬಳಸಿದ ಮಚ್ಚನ್ನು ಹಾಜರುಪಡಿಸಿದ್ದು ಅದನ್ನು ಅಮಾನತ್ತು ಪಡಿಸಿಕೊಂಡ ಮಹಜರ್ ಅನ್ನು 2.15 ರಿಂದ 3 ಗಂಟೆವರೆಗೆ ತನಿಖಾಧಿಕಾರಿಯ ಹೇಳಿಕೆಯಂತೆ ಬರೆದಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-41 ಆ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-41(ಸಿ) ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಎಂ.ಒ-11 ಆ ದಿನ ಅಮಾನತ್ತು ಪಡಿಸಿಕೊಂಡ ಮಚ್ಚು ಇದೆ.

3. ಅದೇ ದಿನ ಆರೋಪಿತ ಕೃತ್ಯದ ಸ್ಥಳಕ್ಕೆ ಕರೆದುಕೊಂಡು ಹೋಗಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಮದ್ಯಾಹ್ನ 3.30 ರಿಂದ 4.15 ರವರೆಗೆ ಕೃತ್ಯ ನಡೆದ ಸ್ಥಳದಲ್ಲಿ ಮಹಜರ್ ಮಾಡಿದ್ದರು ಆ ಕಾಲಕ್ಕೂ ಸಹ ನಾನೇ ಮಹಜರ್ ಬರೆದಿದ್ದೆ. ನಾನು ನೋಡುತ್ತಿರುವ ನಿ.ಪಿ-39 ಆ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-39(ಸಿ) ಎಂದು ಗುರುತಿಸಿದೆ. ಆ ಎಲ್ಲಾ ಮಹಜರ್ ಗಳ ಕಾಲಕ್ಕೆ ಪಂಚರಾಗಿ ಪ್ರತಾಪ್ ಮತ್ತು ಶಿವಣ್ಣ ಹಾಜರಿದ್ದರು.

4. ದಿಃ22.10.2021 ರಂದು ಬೆಳಗಿನ ಜಾವ ತನಿಖಾಧಿಕಾರಿ ಶಶಿಕುಮಾರ್ ಇವರ ಜೊತೆ ನಾನು ಘಟನೆ ಸ್ಥಳಕ್ಕೆ ಹೋಗಿದ್ದೆ ಆ ಕಾಲಕ್ಕೆ ಅವರು ಹೇಳಿದಂತೆ ಮೋಹನ್ ಇವರು ಮಹಜರ್ ಬರೆದಿದ್ದರು ಆ ಕಾಲಕ್ಕೆ ನನಗೆ ನಕಾಶೆ ತಯಾರಿಸುವಂತೆ ಹೇಳಿದ್ದರು ನಾನು ನಕಾಶೆ ತಯಾರಿಸಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-2(ಸಿ) ಎಂದು ಗುರುತಿಸಿರುವ ನಕಾಶೆ ನಾನು ತಯಾರಿಸಿದ್ದ ನಕಾಶೆ ಇದೆ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಸಿ.ಪಿ ರವರಿಂದಃ-</u>

5. ನಿ.ಪಿ-2(ಸಿ) ನಕಾಶೆಯನ್ನು ತಯಾರಿಸಿದ್ದಕ್ಕೆ ಅದರಲ್ಲಿ ನನ್ನ ಸಹಿ ಇಲ್ಲ. ಅದರಲ್ಲಿ ಅದನ್ನು ತಯಾರಿಸಿದ್ದ ಸಮಯ ನಮೂದು ಇಲ್ಲ. ದಿಃ24.10.2021 ರಂದು ಬೆಳಗ್ಗೆ ಆರೋಪಿತನನ್ನು ದಸ್ತಗಿರಿ ಮಾಡಿದ್ದರು ಆರೋಪಿತನನ್ನು ದಸ್ತಗಿರಿ ಮಾಡಿದ್ದ ಸಮಯ ನನಗೆ ಗೊತ್ತಿಲ್ಲ. ಆರೋಪಿ ಹೇಳಿಕೆ ಪಡೆಯುವ ಕಾಲಕ್ಕೆ ನಾನು ಹಾಜರಿರಲಿಲ್ಲ. ಆ ದಿನ ಬೆಳಗ್ಗೆ ಪಂಚರನ್ನು ಠಾಣೆಗೆ ಕರೆಸಿದ್ದರು ಆದರೆ ಸಮಯ ನನಗೆ ಗೊತ್ತಿಲ್ಲ. ಶ್ರೀರಾಂಪುರ ಗ್ರಾಮ ಪಂಚಾಯಿತಿ ಕಛೇರಿ ಹಿಂಭಾಗದಲ್ಲಿರುವ ರಾಮಚಂದ್ರ ಎನ್ನುವವರ ಮನೆ ಬಳಿ ವಾಹನ ಮತ್ತು ಆರೋಪಿತನ ಬಟ್ಟೆಯನ್ನು ಅಮಾನತ್ತು ಪಡಿಸಿಕೊಂಡಿದ್ದರು. ಪಂಚಾಯಿತಿ ಕಛೇರಿಯಿಂದ ಮಹಜರ್ ಮಾಡಿದ ಸ್ಥಳ 2 ಪರ್ಲಾಂಗ್ ದೂರದಲ್ಲಿದೆ. ಆ ವಾಹನವನ್ನು ಯಾವ ಸಮಯಕ್ಕೆ ಅಲ್ಲಿ ನಿಲ್ಲಿಸಿದ್ದ ಎಂದು ಗೊತ್ತಿಲ್ಲ ಆದರೆ ಕೃತ್ಯದ ನಂತರ ನಿಲ್ಲಿಸಿದ್ದಾಗಿ ಆರೋಪಿತ ಹೇಳಿದ್ದ. ರಾಮಚಂದ್ರ ಇವರ ಮನೆಯಲ್ಲಿ ಅವರ ಕುಟುಂಬದವರು ವಾಸವಿದ್ದಾರೆ. ಅಕ್ಕಪಕ್ಕದ ಮನೆಗಳಲ್ಲಿ ಸಹ ಜನಗಳು ವಾಸವಿದ್ದಾರೆ. ಆ ವಾಹನದ ಡಿಕ್ಕಿಯಲ್ಲಿ ರಕ್ತದ ಕಲೆಗಳು ಇರಲಿಲ್ಲ. ಅ ವಾಹನದ ಕೀ ಅನ್ನು ರಾಮಚಂದ್ರ ಇವರ ಮನೆಯಲ್ಲೇ ಕೊಟ್ಟು ಹೋಗಿದ್ದ. ರಾಮಚಂದ್ರ ಇವರ

ಕುಟುಬಂದ ಸದಸ್ಯರೇ ಆ ವಾಹನಂದ ಕೀ ಅನ್ನು ಕೊಟ್ಟಿದ್ದರು. ಆ ಕಾಲಕ್ಕೆ ರಾಮಚಂದ್ರ ಸ್ಥಳದಲ್ಲಿ ಇದ್ದರೋ ಇಲ್ಲವೊ ಗೊತ್ತಿಲ್ಲ. ನಿ.ಪಿ–*26, 27* ಎಂದು ಗುರುತಿಸಿರುವ ಪೊಟೋಗಳಲ್ಲಿ ನಾನು ಇಲ್ಲ. ಆ ಮಹಜರ್ ಗಳ ಕಾಲಕ್ಕೆ ತೆಗೆದ ಯಾವುದೇ ಪೊಟೋಗಳಲ್ಲಿ ನಾನು ಇಲ್ಲ.

*6.* ಮಚ್ಚನ್ನು ವಶಪಡಿಸಿಕೊಂಡಿದ್ದ ಸ್ಥಳ ಮುಡಾ ಲೇಔಟ್ ನಲ್ಲಿದೆ. ಮಹಜರ್ ನಲ್ಲಿ ಸಿದ್ದಲಿಂಗೇಶ್ವರ ಬಡಾವಣೆ ಎಂದು ನಮೂದಿದೆ ಮುಡಾ ಲೇಔಟ್ ಎಂದು ನಮೂದಿಸಿಲ್ಲ. ಆ ಸ್ಥಳದಲ್ಲಿ ಕಟ್ಟಡಗಳು ಇರಲಿಲ್ಲ ಆದರೆ ಗಿಡಗಳು ಬೆಳೆದಿದ್ದವು. ಆ ಸ್ಥಳದ ನಿವೇಶನ ಸಂಖ್ಯೆ ಗೊತ್ತಿಲ್ಲ. ವಶಪಡಿಸಿಕೊಂಡ ಮಚ್ಚಿನ ಮೇಲೆ ದೂಳಿನ ಕಣಗಳು, ಹುಲ್ಲು, ಕಡ್ಡಿ ಇದ್ದ ಬಗ್ಗೆ ನಾನು ಗಮನಿಸಿಲ್ಲ. ನಿ.ಪಿ–*45, 46* ರಲ್ಲಿ ಕಾಣುವ ಸ್ಥಳ ಹುಲ್ಲು, ಕಡ್ಡಿ ಮತ್ತು ದೂಳು ಇರುವ ಸ್ಥಳ ಎಂದರೆ ನಿಜ. ಆ ಪೊಟೋಗಳಲ್ಲಿ ನಾನು ಇಲ್ಲ. ನಿ.ಪಿ–*46* ರಲ್ಲಿ ಬೇರೊಬ್ಬ ಸಿಬ್ಬಂದಿ ಬರವಣಿಗೆ ಮಾಡುತ್ತಿರುವುದು ಕಂಡುಬರುತ್ತದೆ ಎಂದರೆ ನಿಜ. ಮಚ್ಚು ದೊರೆತ ಸ್ಥಳದಿಂದ ಕೃತ್ಯ ನಡೆದ ಸ್ಥಳ ಅಂದಾಜು ಅರ್ಧ ಕಿಮೀ ಗಿಂತ ಕಡಿಮೆ ಇದೆ. ಆ ಸ್ಥಳಕ್ಕೆ ನಾವು ಹೋದಾಗ ಕೃತ್ಯದ ಕುರಿತು ಕುರುಹುಗಳು ಇದ್ದವು. ಆ ಕಾಲಕ್ಕೆ ಆ ಸ್ಥಳದಿಂದ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಅಕ್ಟೋಬರ್ ತಿಂಗಳಿನಲ್ಲಿ ಮಳೆ ಬರುತ್ತದೆ ಎಂದರೆ ಸರಿಯಲ್ಲ. ನಿ.ಪಿ–*39* ರಿಂದ *41* ಮಹಜರ್ ಗಳನ್ನು ಆ ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲೇ ಅದನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಯ ಉಕ್ತಲೇಖನದಂತೆ ಮಹಜರ್ ಗಳನ್ನು ಬರೆದಿದ್ದೇನೆ.

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು